ಅಡ್ವರ್‌ಟೈಸ್‌ಮೆಂಟ್‌ನ್ನು ಕೊಡಿಸಿ, ಫಂಡ್ಸ್‌ನ್ನು ರೈಸ್ ಮಾಡುವುದಕ್ಕೆ ಒಬ್ಬ ನೋಟರಿಯವರನ್ನು ಕರೆದುಕೊಂಡು ಬಂದರು. ಆ ಕಂಪನಿಯು ಒಂದು ನಯಾಪೈಸೆಯ ಫಂಡನ್ನು ನ್ಯಾಷನಲ್ ಗೇಮ್ಸ್‌ಗೆ ಇವತ್ತು ರೈಜ್ ಮಾಡಲಿಲ್ಲ. ಆದರೆ ಅವರಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವತ್ತು ಅವರು ಕೊಟ್ಟ ಒಂದು ಕೋಟಿ ರೂಪಾಯಿಗಳಿಗೆ ಯಾವ ಲೆಕ್ಕವಿದೆ, ಇದಕ್ಕೆ ಯಾವ ಅಧಿಕಾರಿಗಳು ಹೊಣೆಯಾಗಿದ್ದಾರೆ, ಇದು ಏಕೆ ನಡೆಯಿತು? ಇದರ ಬಗ್ಗೆ ತನಿಖೆಯನ್ನು ಮಾಡಬೇಕಾಗುತ್ತದೆ.

ಶ್ರೀ ಆರ್.ರೋಷನ್ ಬೇಗ್: ಅವರು ಸ್ಪೆಸಿಫಿಕ್ ಆಗಿ ಲಿಖಿತ ಮೂಲಕವಾಗಿ ಕೊಡಲಿ, ಅದರ ಬಗ್ಗೆ ನಾನು ವಿಚಾರಣೆಯನ್ನು ಮಾಡಿಸುತ್ತೇನೆ.

ಜಿಲ್ಲಾ ಉಸ್ತುವಾರಿ ಮಂತ್ರಿಗಳ ಕಾರ್ಯವ್ಯಾಪ್ತಿ ಹಾಗೂ ಅಧಿಕಾರ ವ್ಯಾಪ್ತಿ

105 (1088) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;

ಅ) ಜಿಲ್ಲಾ ಉಸ್ತುವಾರಿ ಮಂತ್ರಿಗಳ ಕಾರ್ಯವ್ಯಾಪ್ತಿ ಹಾಗೂ ಅವರ ಅಧಿಕಾರ ವ್ಯಾಪ್ತಿಯ ವಿವರ ನೀಡುವುದು;

ಆ) ಜಿಲ್ಲಾ ಉಸ್ತುವಾರಿ ಮಂತ್ರಿಗಳ ಚಾಮರಾಜನಗರ ಕ್ಷೇತ್ರದ ಶಾಸಕರ ಹಕ್ಕನ್ನು ಕಡೆಗಣಿಸಿರುವುದು ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಗಳು

ಅ) ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ 20 ಅಂಶ ಕಾರ್ಯಕ್ರಮ ಮತ್ತು 15 ಅಂಶ ಕಾರ್ಯಕ್ರಮಗಳನ್ನು ಪರಿಶೀಲಿಸಿ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕಾರ್ಯವನ್ನು ವಹಿಸಲಾಗಿದೆ.

ಆ) ಇಲ್ಲ

ಇ) ಅನ್ವಯಿಸುವುದಿಲ್ಲ.

12.00 ಪಿಎಂ

ಶ್ರೀ ಸಿ.ಗುರುಸ್ವಾಮಿ: ಮಾನ್ಯಅಧ್ಯಕ್ಷರೆ, ಸರ್ಕಾರ ಪ್ರತಿ ಜಿಲ್ಲೆಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಮಾಡಿರುವ ಬಗ್ಗೆ ಅವರ ಕಾರ್ಯವ್ಯಾಪ್ತಿಯ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಉತ್ತರವನ್ನು ಇಲ್ಲಿ ಕೊಡಲಾಗಿದೆ. ಅವರ ಕಾರ್ಯವ್ಯಾಪ್ತಿ ಮತ್ತು ಕೆಲಸ ಏನೆಂದರೆ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ, 20 ಅಂಶಗಳ ಕಾರ್ಯಕ್ರಮ ಮತ್ತು 15 ಅಂಶಗಳ ಕಾರ್ಯಕ್ರಮವನ್ನು ಪರಿಶೀಲಿಸಿ ಅವುಗಳನ್ನು ಪರಿಣಾಕಾರಿಯಾಗಿ ಅನುಷ್ಠಾನಗೊಳಿಸುವ ಕಾರ್ಯವನ್ನು ವಹಿಸಲಾಗಿದೆಯೆನ್ನತಕ್ಕ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಜಿಲ್ಲಾ ಮಂತ್ರಿಗಳು ಬೈಪಾಸ್ ರಸ್ತೆಗೆ ಗುದ್ದಲಿ ಪೂಜೆ ಕಾರ್ಯಕ್ರಮವನ್ನು ಮಾಡುವಾಗ ನನ್ನ ಕ್ಷೇತ್ರದ ಕಾರ್ಯವ್ಯಾಪ್ತಿಯಲ್ಲಿ

ಬರತಕ್ಕದ್ದನ್ನು ಜಿಲ್ಲಾ ಉಸ್ತುವಾರಿ ಮಂತ್ರಿಗಳು ನನ್ನ ಜೊತೆಯಲ್ಲಿ ಯಾವುದೇ ರೀತಿಯ ಸಮಾಲೋಚನೆಯನ್ನು ಮಾಡದೆ ಅವರೇ ಆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿಕ್ಕೆ ಬರುತ್ತದೆಯೋ ಈ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಈಗಾಗಲೇ ಸಂಬಂಧಪಟ್ಟ ಮಂತ್ರಿಗಳಿಗೆ ಹಾಗೂ ತಮಗೂ ಕೂಡ ಪತ್ರವನ್ನು ಬರೆದು ಶಾಸಕರಿಗೆ ಕೊಟ್ಟಿರತಕ್ಕ ಹಕ್ಕನ್ನು ಜಿಲ್ಲಾ ಉಸ್ತುವಾರಿ ಸಚಿವರು ಕಸಿದುಕೊಂಡಿದ್ದಾರೆನ್ನತಕ್ಕ ಪ್ರಶ್ನೆಯನ್ನು ನಾನು ಎತ್ತಿದ್ದೇನೆ. ಆವೊಂದು ಅಧಿಕಾರ ಜಿಲ್ಲಾಮಂತ್ರಿಗಳಿಗೆ ಬರುತ್ತದೆಯೇ? ಇದರ ಬಗ್ಗೆ ಮಂತ್ರಿಗಳು ಉತ್ತರವನ್ನು ಕೊಡಬೇಕು.

ಶ್ರೀಮತಿ ಸುಮಾ ವಸಂತ್: (ಯೋಜನಾ ಖಾತೆ ರಾಜ್ಯಸಚಿವರು). ಮುಖ್ಯಮಂತ್ರಿಗಳ ಪರವಾಗಿ) ಮಾನ್ಯಅಧ್ಯಕ್ಷರೆ, ಮಾನ್ಯ ಸದಸ್ಯರ ಹಕ್ಕನ್ನು ಕಡೆಗಣಿಸಿರುವ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ. ಅಂತಹ ಯಾವುದೇ ನಿಖರವಾದ ಮಾಹಿತಿ ಇದ್ದರೆ ಕಳುಹಿಸಿಕೊಡಿ.

ಶ್ರೀ ಸಿ.ಗುರುಸ್ವಾಮಿ: ನಾನು ಮುಖ್ಯ ಮಂತ್ರಿಗಳಿಂದ ಉತ್ತರವನ್ನು ಬಯಸಿದ್ದೆ.

ಅಧ್ಯಕ್ಷರು: ಶ್ರೀಮತಿ ಸುಮಾ ವಸಂತ್‌ರವರು ಯೋಜನಾ ಮಂತ್ರಿಗಳು ಇದ್ದಾರೆ ಅವರು ಉತ್ತರ ಕೊಡುತ್ತಾರೆ. Why do you want reply from the Chief Minister?

ಶ್ರೀಮತಿ ಸುಮಾ ವಸಂತ್: ಮಾನ್ಯ ಸದಸ್ಯರ ಹಕ್ಕನ್ನು ಕಡೆಗಣಿಸಿರುವ ಬಗ್ಗೆ ನಿಖರವಾದ ಮಾಹಿತಿಯನ್ನು ಕೊಟ್ಟರೆ ಅದರ ಬಗ್ಗೆ ಗಂಭೀರವಾದ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಜಿಲ್ಲೆಗಳಿಗೆ ಉಸ್ತುವಾರಿ ಸಚಿವರುಗಳನ್ನು ನೇಮಕ ಮಾಡುವಂತಹದ್ದು ಹಿಂದಿನಿಂದಲೂ ನಡೆದು ಬಂದಿರುವಂತಹ ಒಂದು ಸಂಪ್ರದಾಯ. ಜಿಲ್ಲೆಯಲ್ಲಿ ನಡೆಯತಕ್ಕ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ವಿಮರ್ಶೆ ಮಾಡುವುದಕ್ಕೆ ಮತ್ತೆ ಅದರ ಪ್ರಗತಿಯನ್ನು ಅನುಷ್ಠಾನಗೊಳಿಸುವುದಕ್ಕೆ ಜಿಲ್ಲಾ ಮಂತ್ರಿಗಳು ಇರಬೇಕೆನ್ನುವುದು ಅವಶ್ಯಕ ಎನ್ನುವುದನ್ನು ನಾವು ಕೂಡ ಒಪ್ಪುತ್ತೇವೆ. ಆದರೆ ಆ ಜಿಲ್ಲಾ ಉಸ್ತುವಾರಿ ಸಚಿವರು ಪ್ರತಿಯೊಂದು ಕ್ಷೇತ್ರದಲ್ಲೂ ನಡೆಯತಕ್ಕ ಅಭಿವೃದ್ಧಿ ಕಾರ್ಯಕ್ರಮಗಳು ಸಣ್ಣಪುಟ್ಟ ಕಾರ್ಯಕ್ರಮಗಳು ನನ್ನ ಗಮನಕ್ಕೆ ಬಾರದೆ ನಡೆಯಕೂಡದು ಎನ್ನುವ ಕಟ್ಟಾಜ್ಞೆಯನ್ನು ಜಿಲ್ಲಾ ಅಧಿಕಾರಿಗಳಿಗೆ ಸೂಚನೆ ಮೂಲಕ ಕೊಟ್ಟಿದ್ದಾರೆ. ಹಾಗಾಗಿ ನಮ್ಮ ಕ್ಷೇತ್ರದಲ್ಲಿ ಒಂದು ಮಿಲ್ಕ್ ಬೂತ್ ಓಪನ್ ಮಾಡಬೇಕಾದರೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಪರ್ಮಿಶನ್ ತೆಗೆದುಕೊಂಡು ಮಾಡಬೇಕಾದ ಪರಿಸ್ಥಿತಿ ಉಂಟಾಗಿದೆ.

ಅಧ್ಯಕ್ಷರು: ಯೋಜನಾ ಮಂತ್ರಿಗಳು ಅದರ ಬಗ್ಗೆ ನನಗೇನೂ ದೂರು ಬಂದಿಲ್ಲವೆಂದು ಹೇಳಿದ್ದಾರೆ. ದೂರು ಕೊಡಿ, ಆಮೇಲೆ ಅದಕ್ಕೆ ಉತ್ತರ ಹೇಳುತ್ತಾರೆ. ಬೇರೆ ಪ್ರಶ್ನೆ ಕೇಳಿ. ವೇಗ್ ಆಗಿರುವ ಪ್ರಶ್ನೆ ಕೇಳಬೇಡಿ. ದೂರು ಬಂದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ದೂರು ಬಂದರೆ ಅದರ ಬಗ್ಗೆ ವಿಚಾರಣೆ ಮಾಡುತ್ತಾರೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಶಾಸಕರ ಹಕ್ಕನ್ನು ರಕ್ಷಣೆ ಮಾಡಬೇಕಾದ ಕರ್ತವ್ಯ ತಮ್ಮದೂ ಇದೆ.

ಅಧ್ಯಕ್ಷರು: ಯೋಜನಾ ಮಂತ್ರಿಗಳು, ಮಾನ್ಯಸದಸ್ಯರು ಶಾಸಕರ ಹಕ್ಕನ್ನು ಕಸಿದುಕೊಂಡಿದ್ದಾರೆಂದು ಏನು ಹೇಳುತ್ತಾರೆ ಅದರ ಬಗ್ಗೆ ವಿಚಾರಣೆ ಮಾಡಿ.

ಶ್ರೀ ಸಿ.ಭೈರೇಗೌಡ: ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿದ್ದಾರೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುವುದನ್ನು ನೋಡಿದರೆ, ನೇರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿರತಕ್ಕದ್ದು. ಈ ಪ್ರಶ್ನೆಗೆ ಉತ್ತರ ಕೊಡಬೇಕಾಗಿರುವವರು ಮಾನ್ಯ ಮುಖ್ಯ ಮಂತ್ರಿಗಳು. ನಮಗೆ ಒದಗಿಸಿರತಕ್ಕ ಉತ್ತರದಲ್ಲಿ ಸಹಿ ಇರತಕ್ಕದ್ದು ಮುಖ್ಯಮಂತ್ರಿಗಳದ್ದು. ಇದು ಶಾಸಕರು ಮತ್ತು ಮಂತ್ರಿಗಳಿಗೆ ಸಂಬಂಧವಿರತಕ್ಕ ಕಾರಣದಿಂದ ಮುಖ್ಯ ಮಂತ್ರಿಗಳು ಇದರ ಬಗ್ಗೆ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಆಗಿರುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನೂ ಕೂಡ ಓದಿದ್ದೇನೆ. ರಸ್ತೆಗೆ ಎಸ್ಟಿಮೇಟ್ ಇಲ್ಲ, ಸ್ಯಾಂಕ್ಷನ್ ಆಗಿರತಕ್ಕದ್ದು ಇಲ್ಲ, ಆ ರಸ್ತೆಗೆ ಅಡಿಗಲ್ಲು ಹಾಕತಕ್ಕ ಕಾರ್ಯಕ್ರಮಕ್ಕೆ ಮಂತ್ರಿಗಳು ಹೋಗುತ್ತಾರೆ. ಅಂತಹ ಸಂದರ್ಭದಲ್ಲಿ ಆ ಕ್ಷೇತ್ರದ ಶಾಸಕರು ಅಲ್ಲಿರತಕ್ಕ ಅವಕಾಶವನ್ನು ಮಾಡಿಕೊಟ್ಟಿಲ್ಲ. ಈ ರೀತಿಯಾಗಿ ಶಾಸಕರ ಕ್ಷೇತ್ರಗಳಲ್ಲಿ ಒಬ್ಬ ಮಂತ್ರಿಗಳಾಗಿರತಕ್ಕವರು ಹಸ್ತಕ್ಷೇಪ ಮಾಡುವುದಾದರೆ, ಆ ಕ್ಷೇತ್ರದ ಶಾಸಕರನ್ನು ಕಡೆಗಣಿಸುವುದಾದರೆ, ಆ ಕ್ಷೇತ್ರದ ಶಾಸಕರ ಹಕ್ಕಿಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಹೇಳಬೇಕಾಗುತ್ತದೆ.

ಅಧ್ಯಕ್ಷರು: ನಮ್ಮ ಕಡತಗಳ ಪ್ರಕಾರ ಮೊದಲು ಆ ಪ್ರಶ್ನೆ ಮುಖ್ಯ ಮಂತ್ರಿಗಳಿಗೆ ಹೋಗಿತ್ತು ನಂತರ ಯೋಜನಾ ಮಂತ್ರಿಗಳಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ.

ಶ್ರೀ ಸಿ.ಭೈರೇಗೌಡ: ನನಗೆ ಬಂದಿರುವ ಉತ್ತರದ ಪ್ರತಿ ಇಲ್ಲಿದೆ. ಸಹಿ: ಎಸ್.ಎಂ.ಕೃಷ್ಣ, ಮುಖ್ಯಮಂತ್ರಿಗಳು ಎಂದು ಇದೆ.

ಅಧ್ಯಕ್ಷರು: ಇರಬಹುದು, ಆಮೇಲೆ ಅದನ್ನು ಯೋಜನಾ ಮಂತ್ರಿಗಳಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ.

ಶ್ರೀ ಸಿ.ಭೈರೇಗೌಡ: ಅದು ಒಂದು ಕಡೆ ಇರಲಿ. ಇದು ಒಬ್ಬ ಶಾಸಕರ ಮತ್ತು ಮಂತ್ರಿಗಳ ಸಂಬಂಧವಿರುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರಾಗಿರುವವರಿಗೆ ಏನೇನು ಕೆಲಸ ಮಾಡಲಿಕ್ಕೆ ವಹಿಸಿದ್ದೀರಿ ಎಂಬುದಕ್ಕೆ ಸಂಬಂಧಪಡುತ್ತದೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ತಾವು ಬೇರೆ ಪ್ರಶ್ನೆ ಕೇಳಿ ಅವರು ಉತ್ತರ ಹೇಳುತ್ತಾರೆ. ಸಂಬಂಧಪಟ್ಟ ಆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಏನು ಮಾಡಿದ್ದಾರೆಂಬುದನ್ನು ತಿಳಿದುಕೊಳ್ಳುವುದಕ್ಕೆ ಅವರಿಗೆ ಸಮಯ ಬೇಕಾಗುತ್ತದೆ. ತಕ್ಷಣ ಪ್ರಶ್ನೆ ಕೇಳಿದರೆ ಹೇಗೆ ಉತ್ತರ ಹೇಳುವುದಕ್ಕಾಗುತ್ತದೆ?

ಶ್ರೀ ಸಿ.ಭೈರೇಗೌಡ: ಶಾಸಕರಿಗೆ ಅವರ ಕ್ಷೇತ್ರದಲ್ಲಿ ಅವಮಾನ ಆಗುವುದಾದರೆ ಉಸ್ತುವಾರಿ ಸಚಿವರಿಂದ ಆಗುವುದಾದರೆ ಹೇಗೆ ಶಾಸಕರು ಕೆಲಸ ಮಾಡುವುದು?

ಅಧ್ಯಕ್ಷರು: ತಾವು ಹೇಳುವುದನ್ನು ನಾನು ಒಪ್ಪಿಕೊಂಡೆ. ತಾವು ಏನು ಹೇಳುತ್ತಿದ್ದೀರಿ ಅದು ಗಂಭೀರವಾದ ಪ್ರಶ್ನೆ. ಅವರು ಉತ್ತರ ಹೇಳುವುದಕ್ಕೆ ತಯಾರಾಗಬೇಕಲ್ಲ. ಬೇರೆ ಪ್ರಶ್ನೆ ಕೇಳಲಿ ಅವರು ಉತ್ತರ ಹೇಳುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಯೋಜನಾ ಸಚಿವರು ಉತ್ತರ ಕೊಟ್ಟಿದ್ದಾರೆ. ಕೊನೆಯ ಪಕ್ಷ ಮುಖ್ಯಮಂತ್ರಿಗಳು ಎದ್ದುನಿಂತುಕೊಂಡು ಉತ್ತರ ಕೊಟ್ಟರೆ ಪ್ರಾಪರ್ ಮೆಸೇಜ್ ಹೋಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರಿಂದ ಮುಂದೆ ಈ ರೀತಿ ಆಗಬಾರದು.

ಅಧ್ಯಕ್ಷರು: ಉತ್ತರ ಕೊಡುವುದಕ್ಕೆ ಅವರ ಹತ್ತಿರ ಮಾಹಿತಿ ಇರಬೇಕಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಈಗ ಒಂದು ಉದಾಹರಣೆಯನ್ನು ಈ ಸಭೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದಾರೆ. ಈ ಸಮಯದಲ್ಲಿ ನಾನು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಶಾಸಕರಲ್ಲೂ ಕೂಡ ಧೈರ್ಯ ತುಂಬಿಸಿ. ಮುಂದೆ ಈ ರೀತಿ ಆಗುವುದಿಲ್ಲ, ಉಸ್ತುವಾರಿ ಸಚಿವರು ಆ ಶಾಸಕರನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಳ್ಳುತ್ತಾರೆಂದು ದಯವಿಟ್ಟು ಹೇಳಬೇಕು.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ ತಾವು ಕುಳಿತುಕೊಳ್ಳಿ.

ಶ್ರೀ ಸಿ.ಗುರುಸ್ವಾಮಿ: ಇಲ್ಲಿ ಸಂಪೂರ್ಣವಾದ ಮಾಹಿತಿ ಇದೆ, ಅದನ್ನು ನೋಡಿಬಿಟ್ಟು ಉತ್ತರ ಕೊಟ್ಟರೆ ಒಳ್ಳೆಯದು.

ಒಬ್ಬ ಮಾನ್ಯ ಸದಸ್ಯರು: ಇದೊಂದು ವ್ಯವಸ್ಥಿತ ಪಿಡುಗಾಗಿ ಪರಿಣಮಿಸುತ್ತಿದೆ.

ಅಧ್ಯಕ್ಷರು: ಅದಕ್ಕೆ ಉತ್ತರ ಹೇಳುತ್ತಾರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದ್ಯಸರು: ವಿರೋಧ ಪಕ್ಷಗಳ ಶಾಸಕರನ್ನು ಕಡೆಗಣಿಸುವುದು ವ್ಯವಸ್ಥಿತವಾಗಿ ಎಲ್ಲಾ ಜಿಲ್ಲೆಗಳಲ್ಲೂ ನಡೆಯುತ್ತಿದೆ. ಚಾಮರಾಜನಗರ ಜಿಲ್ಲೆಯ ವಿಚಾರವನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲೂ ಇದು ನಡೆಯುತ್ತಿದೆ.

ಶ್ರೀ ಎಸ್.ಎಂ.ಕೃಷ್ಣ: (ಮುಖ್ಯಮಂತ್ರಿ): ಜಿಲ್ಲಾ ಉಸ್ತುವಾರಿ ಸಚಿವರ ನೇಮಕವನ್ನು ಹೊಸದಾಗಿ ಏನು ಮಾಡುತ್ತಿಲ್ಲ. ಹತ್ತು ಹಲವಾರು ವರ್ಷಗಳಿಂದ ನಡೆದು ಬಂದಿರತಕ್ಕ ಪದ್ಧತಿಯನ್ನು ಈ ಸರ್ಕಾರ ಮುಂದುವರಿಸಿಕೊಂಡು ಬಂದಿದೆ. ಉಸ್ತುವಾರಿ ಮಂತ್ರಿಗಳ ಜವಾಬ್ದಾರಿಯೇನು ಅವರು ನಿರ್ವಹಿಸಬೇಕಾಗಿರತಕ್ಕ ಕಾರ್ಯವೇನು ಎನ್ನತಕ್ಕದ್ದರ ಬಗ್ಗೆ ಲಿಖಿತ ಮೂಲಕವಾದ ಉತ್ತರವನ್ನು ಅವರು ಕೊಟ್ಟಿದ್ದಾರೆ. ಎಲ್ಲಿಯಾದರೂ ಶಾಸನಸಭಾ ಸದಸ್ಯರಿಗೆ ಏನು ಮಾನ್ಯತೆ ಸಿಗಬೇಕು ಅದು ಸಿಗಲಿಲ್ಲವೆನ್ನತಕ್ಕ ಕೊರತೆಗಳು ಸರ್ಕಾರದ ಗಮನಕ್ಕೆ ಬಂದರೆ ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ ಎನ್ನುವ ಆಶ್ವಾಸನೆಯನ್ನು ನನ್ನ ಸಹೋದ್ಯೋಗಿಗಳು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಕೆಲವಾರು ನಿದರ್ಶನಗಳು ಇವೆ ಎಂದು ಹೇಳಿದ್ದಾರೆ. ಆ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಸರ್ಕಾರದ ವತಿಯಿಂದ ಹೇಗೆ ಸುಧಾರಿಸಬಹುದು ಎನ್ನುವ ಬಗ್ಗೆ ಯೋಚನೆ ಮಾಡೋಣ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಶನ್. ಇದೇ ವಿಚಾರದಲ್ಲಿ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು: ಇಲ್ಲ, ಒಂದಕ್ಕೊಂದು ಬೆಳೆದುಕೊಂಡು ಹೋಗುತ್ತದೆ. ನೀವು ಅವರ ಗಮನಕ್ಕೆ ತನ್ನಿ.

ಶ್ರೀ ಕೆ.ಹೆಚ್.ಹನುಮೇಗೌಡ: ದಯವಿಟ್ಟು ಅವಕಾಶ ಕೊಡಿ. ನಮಗೆ ತೊಂದರೆಯಾಗುತ್ತಿದೆ.

ಅಧ್ಯಕ್ಷರು: ಮುಖ್ಯಮಂತ್ರಿಗಳು ನನ್ನ ಗಮನಕ್ಕೆ ತನ್ನಿಯೆಂದು ಹೇಳಿದ ಮೇಲೆ ನೀವು ಏಕೆ ಮತ್ತೆ ಕೇಳುತ್ತೀರಿ? ವೆರಿ ಸಾರಿ ಮಿಸ್ಟರ್ ಹನುಮೇಗೌಡರೆ, ಗಮನಕ್ಕೆ ತನ್ನಿ ನಾನು ಗಂಭೀರವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ನನಗೆ ಕಳಿಸಿಕೊಡಿ ಎಂದು ಹೇಳಿದ್ದಾರೆ. ಪುನಃ ಇನ್ನೊಂದು ಸಲ ಕಳಿಸಿಕೊಡಿ.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೆ, 15ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 109 ಪ್ರಶ್ನೆಗಳ ಪೈಕಿ 9 ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳು

1657 (2318) ಶ್ರೀ ಆಶೋಕ್ ಆರ್ (ಉತ್ತರಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:-

ಅ) ಕಳೆದ 2 ವರ್ಷಗಳಲ್ಲಿ ನಬಾರ್ಡ್ ಆರ್ಥಿಕ ನೆರವಿನಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ರಸ್ತೆ, ಒಳಚರಂಡಿ ಮತ್ತು ಇತರೆ ಕಾಮಗಾರಿ ಕೆಲಸಗಳೆಷ್ಟು:

ಆ) ಆ ಪೈಕಿ ಪ್ರಸ್ತುತ ಸಾಲಿನಲ್ಲಿ ಯಾವ ಯಾವ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ;

ಇ) ಇದರಲ್ಲಿ ಇದುವರೆವಿಗೂ ಪೂರ್ಣವಾಗಿರುವ ಕಾಮಗಾರಿ ಕೆಲಸಗಳೆಷ್ಟು; ಅವು ಯಾವುವು? (ಮಾಹಿತಿ ಒದಗಿಸುವುದು)

ಶ್ರೀ ಧರ್ಮ ಸಿಂಗ್ (ಲೋಕೋಪಯೋಗಿ ಸಚಿವರು).

ಅ) ಕಳೆದ ಎರಡು ವರ್ಷಗಳಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಗೊಂಡಿರುವ ಕಾಮಗಾರಿಗಳು ಈ ಕೆಳಕಂಡಂತೆ ಇದೆ.